SC:77/2020
PW: 42 CW:44

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ:77/2020

| | |
|---|---|
| PW | 42 |
| CW | 44 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 24.11.2025.

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ್ |
| ತಂದೆಯ ಹೆಸರು | : | ಗಂಗಪ್ಪ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಮಾರ್ಕೇಟಿಂಗ್ ಕೆಲಸ |
| ವಾಸಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ನನಗೆ ಮೃತ ನವೀನ್ ಇವರ ಪರಿಚಯ ಇರಲಿಲ್ಲ. ಈ ಕೇಸಿನ ಯಾವುದೇ ಸಾಕ್ಷಿದಾರರ ಪರಿಚಯ ಇಲ್ಲ. ನನಗೆ ಈ ಕೇಸಿನ 4 ನೇ ಆರೋಪಿ ದೀಪಾಳ ಪರಿಚಯ ಇದ್ದು , ಉಳಿದ ಆರೋಪಿತರ ಪರಿಚಯ ಇಲ್ಲ.

2. ನಾನು ಹಾಗೂ 4 ನೇ ಆರೋಪಿ ಒಂದೇ ಗ್ರಾಮದವರಾಗಿದ್ದು ನಾವಿಬ್ಬರೂ ಸಹ ಪಾಟಿಗಳಾಗಿದ್ದೆವು. ನಾನು ಹಾಗೂ 4 ನೇ ಆರೋಪಿ ಮೊದಲು ಪರಸ್ಪರ ಪ್ರೀತಿಸುತ್ತಿದ್ದು, ನಮ್ಮಿಬ್ಬರ ಜಾತಿ ಬೇರೆ ಬೇರೆ ಆಗಿದ್ದ ಕಾರಣ ನಮ್ಮ ಮದುವೆ ಆಗಿರುವುದಿಲ್ಲ. ನಾನು 10

ವರ್ಷ ಆದ ನಂತರ ನಮ್ಮ ಊರಿಗೆ ಬಂದಾಗ 4 ನೇ ಆರೋಪಿ ಸಿಕ್ಕಿದ್ದು , ನನ್ನ ಮೊಬೈಲ್ ನಂಬರ್ ನ್ನು ಪಡೆದಿರುತ್ತಾರೆ. 2020 ರಲ್ಲಿ ಕೊವಿಡ್ ಪ್ರಯುಕ್ತ ಲಾಡ್ ಡೌನ್ ಇದ್ದ ಕಾರಣ 4 ನೇ ಆರೋಪಿ ತನಗೆ ಅವಶ್ಯಕತೆ ಇರುವ ಕಾರಣ ನನ್ನ ಸಿಮ್ ಕಾರ್ಡ್ ಕೊಡಲು ಕೇಳಿದ್ದು ಅದಕ್ಕಾಗಿ , ನನ್ನ ಸಿಮ್ ಕಾರ್ಡ್ ನ್ನು 4 ನೇ ಆರೋಪಿಗೆ ನೀಡಿರುತ್ತೇನೆ. 4 ನೇ ಆರೋಪಿ ಸ್ವಲ್ಪ ದಿವಸಗಳ ನಂತರ ಸಿಮ್ ಕಾರ್ಡ್ ನ್ನು ವಾಪಸ್ಸು ಕೊಡುವುದಾಗಿ ತಿಳಿಸಿದ್ದರು.

3. ಆಗ ಲಾಕ್ ಡೌನ್ ಇದ್ದ ಕಾರಣ ನಮ್ಮ ಊರಿಗೆ ಬರಲು ಆಗಿರುವುದಿಲ್ಲ. ನಾನು ದೂರದರ್ಶನದಲ್ಲಿ ನ್ಯೂಸ್ ನೋಡಿದಾಗ ಘಟನೆಯ ವಿಚಾರ ತಿಳಿದು ಬಂದಿರುತ್ತದೆ. ಆ ಸಮಯದಲ್ಲಿ ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿದ್ದೆನು. ನಾನು 4 ನೇ ಆರೋಪಿಗೆ ಮೊದಲಿಗೆ ಸಿಮ್ ಕಾರ್ಡ್ ನ ನಂಬರ್ 9108226692 ನೀಡಿದ್ದು ಅದು ಕಳೆದು ಹೋದ ಕಾರಣ 4 ನೇ ಆರೋಪಿಗೆ ಮತ್ತೊಂದು ಸಿಮ್ ಕಾರ್ಡ್ ನಂ.9108828704 ನೀಡಿದ್ದೆನು.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಪಿ.ಎಸ್ ವಕೀಲರಿಂದಃ</u>**

4. ಚಿಕ್ಕಬಳ್ಳಾಪುರ ಪೊಲೀಸರು ನಿಮ್ಮನ್ನು ಯಾವಾಗ ಕರೆಸಿದ್ದರು ಎಂದರೆ ಸಾಕ್ಷಿಯು ಸರಿಯಾಗಿ ನೆನಪಿಲ್ಲ ಆದರೆ 2000 ಇಸವಿಯಲ್ಲಿ ಕರೆಸಿದ್ದರು ಎಂದು ಮೊದಲಿಗೆ ನುಡಿದು ನಂತರ 2020 ನೇ ಇಸವಿ ಎಂದು ಉತ್ತರಿಸಿರುತ್ತಾರೆ. ಪೊಲೀಸರು ಈ ಪ್ರಕರಣದಲ್ಲಿ ನನ್ನನ್ನು ಒಂದು ಬಾರಿ ಮಾತ್ರ ವಿಚಾರಣೆ ಮಾಡಿರುತ್ತಾರೆ. ಅರ್ಚನ ಎಂಬುವವರು ನನ್ನ ಸಹೋದರಿ

ಆಗಿರುತ್ತಾರೆ. ನಾನು ನನ್ನ ಸಾಕ್ಷಿಯಲ್ಲಿ ಹೇಳಿದ ಸಿಮ್ ಕಾರ್ಡ್ ಅರ್ಚನ ಇವರ ಹೆಸರಿನಲ್ಲಿ ಖರೀದಿಸಿದ್ದು ಎಂದರೆ ಸರಿ . ಪೊಲೀಸರು ನನ್ನನ್ನು ವಿಚಾರಣೆ ಮಾಡುವ ಮೊದಲೇ ಅರ್ಚನಾಳನ್ನು ವಿಚಾರಣೆ ಮಾಡಿದ್ದರು ಎಂದರೆ ಸರಿ . ನಾನು ಹೇಳಿದಂತಂಹ ಸಿಮ್ ಕಾರ್ಡ್ ನ್ನು ಖರೀದಿಸಿದ ಬಗ್ಗೆ ಪೊಲೀಸರು ನಮ್ಮಿಂದ ಯಾವುದೇ ದಾಖಲೆಗಳನ್ನು ಸಂಗ್ರಹಿಸಿಲ್ಲ.

5. ಪೊಲೀಸರು ನನ್ನನ್ನು ಹಾಗೂ ನನ್ನ ಸಹೋದರಿ ಅರ್ಚನಾಳನ್ನು ಕರೆಸಿ , ವಿಚಾರಣೆ ಮಾಡಿ , ನಮ್ಮಿಬ್ಬರನ್ನು ಪ್ರಕರಣದಲ್ಲಿ ಆರೋಪಿತರನ್ನಾಗಿ ಸೇರಿಸಬೇಕು ಎಂದು ತಿಳಿಸಿದ್ದರು ಎಂದರೆ ಸರಿ . ನಂತರ ನಮ್ಮ ಊರಿನ ಮುಖಂಡರು ಬಂದು ಸುಮಾರು 1 ವಾರಗಳ ಕಾಲ , ಮಾತು ಕತೆ ನಡೆಸಿದ ನಂತರ ಪೊಲೀಸರು ನಮ್ಮನ್ನು ಬಿಟ್ಟರು ಎಂದರೆ ಸರಿ . ನಮ್ಮ ಊರಿನ ಮುಖಂಡರು ಪೊಲಿಸೀರು ಬಳಿ ಬಂದು 1 ವಾರಗಳ ಕಾಲ ಮಾತುಕತೆ ನಡೆಸಿದ ಸಂದರ್ಭದಲ್ಲಿ ನಾನು 4 ನೇ ಆರೋಪಿತ ದೀಪಾಳ ವಿಚಾರವನ್ನು ಪೊಲೀಸರ ಮುಂದೆ ಹೇಳಿರಲಿಲ್ಲ ಎಂದರೆ ಸರಿ .

6. ನನ್ನ ಆಧಾರ ಕಾರ್ಡ್‌ನಲ್ಲಿ ಕಾದರಿಪುರ ಗ್ರಾಮ, ಕಸಬಾ ಹೋಬಳಿ , ಮುಳಬಾಗಿಲು ತಾಲ್ಲೂಕು ಎಂದು ವಿಳಾಸ ತೋರಿಸಿಲ್ಲ ಎಂದರೆ ಸರಿ . ಪೊಲೀಸರು ನನ್ನನ್ನು ಹಾಗೂ ಅರ್ಚನಾಳನ್ನು ಕರೆದುಕೊಂಡು ಹೋದ ನಂತರ ನಮ್ಮ ಊರಿನ ಮುಖಂಡರು ಬಂದು ಪೊಲೀಸರ ಜೊತೆ ಮಾತುಕತೆ ನಡೆಸಿದ ನಂತರ ಮೇಲ್ಕಂಡ ವಿಳಾಸವನ್ನು ಪೊಲೀಸರು ಬರೆದುಕೊಂಡರು ಎಂದರೆ ಸರಿ . ಪೊಲೀಸರು ನಮ್ಮನ್ನು ಕರೆದುಕೂಂಡು ಹೋದ ಮೇಲೆ

ನಮ್ಮ ಮುಖಂಡರು ಬಂದು ಮಾತುಕತೆ ನಡೆಸಿ ನನ್ನನ್ನು ಠಾಣೆಯಿಂದ ಬಿಡುವವರೆಗೂ 4 ನೇ ಆರೋಪಿಯನ್ನು ನಾನು ಠಾಣೆಯಲ್ಲಿ ನೋಡಿರಲಿಲ್ಲ ಎಂದರೆ ಸರಿ . ನಾನು ಹೇಳಿದಂತಹ ಸಿಮ್ ಕಾರ್ಡ್ ಹಾಗೂ ಮೊಬೈಲ್ ನ್ನು ಪೊಲೀಸರು ನನ್ನನ್ನು ಹಾಗೂ ಅರ್ಚನಾಳನ್ನು ಕರೆದುಕೊಂಡು ಹೋಗಿ ವಿಚಾರಣೆ ಮಾಡಿಕೊಂಡು ಹೋಗಿ ನಮ್ಮಿಂದ ವಶಪಡಿಸಿಕೊಂಡರು ಎಂದರೆ ಸರಿ .

7. ನಾನು ಹಾಗೂ ಅರ್ಚನ ನವೀನ್ ಕುಮಾರ್ ಇವರ ಕೊಲೆ ಕೇಸಿನಲ್ಲಿ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮಾನ್ಯ ಸರ್ಕಾರಿ ಅಭಿಯೋಜಕರು ನನ್ನ ಮುಖ್ಯ ವಿಚಾರಣೆ ಮಾಡಿದಾಗ ಈ ಎಲ್ಲಾ ವಿಚಾರಗಳನ್ನು ಹೇಳಿರುತ್ತೇನೆ ಎಂದರೆ ಸರಿ . ನಾನು ಯಾವುದೇ ಸಮಯದಲ್ಲಿ ನಾನು ಹೆಲೇಳಿದಂಂತಹ ಸಿಮ್ ಕಾರ್ಡ್ ನ್ನು ದೀಪಾಳಿಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎರಡೂ ಸಿಮ್ ಕಾರ್ಡ್ ಗಳನ್ನು ನಾನು 4 ನೇ ಆರೋಪಿಗೆ ಯಾವುದೇ ಸಮಯದಲ್ಲಿ ನೀಡಿರಲಿಲ್ಲ ಎಂದರೆ ಸರಿರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀಲ ಹೆಚ್ ಆರ್ ವಿ ವಕೀಲರಿಂದ**

ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವುದಾಗಿ ನುಡಿದಿರುತ್ತಾರೆ.

**ಮರುವಿಚಾರಣೆಃ ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 24.11.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

SC:77/2020
PW: 42 CW:44